**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 2459/2025**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ವೆಂಕಟೇಶ | ಸಿ.ಡಬ್ಲ್ಯೂ-01 |
| ತಂದೆಯ ಹೆಸರು | : | ಸಣ್ಣಪ್ಪ | ಪಿ.ಡಬ್ಲ್ಯೂ-01 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಚಿತ್ರಯ್ಯನಹಟ್ಟಿ | ದಿಃ 07-02-2026. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 20.07.02025 ರಂದು ಹೊಸದುರ್ಗಕ್ಕೆ ಹೋಗಬೇಕಾಗಿದ್ದರಿಂದ ಬೆಗಳಿಗೆ 08-35 ರ ಸಮಯದಲ್ಲಿ ಚಿತ್ರನಾಯಕನಹಳ್ಳಿಯಿಂದ ನನ್ನ ಬಾಬ್ತು ಮೋಟಾರ್ ಬೈಕ್ ನೊಂದಣಿ ಸಂಖ್ಯೆ ಕೆಎ-16 ಇಎ-5480 ರ ವಾಹನದಲ್ಲಿ ಬೆಳಿಗ್ಗ 09-00 ಗಂಟೆಗೆ ಬಂದು ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಪಕ್ಕದಲ್ಲಿ ವಾಹನವನ್ನು ನಿಲ್ಲಿಸಿ ಕೆ ಎಸ್ ಆರ್ ಟಿ ಸಿ ಹೊಸದುರ್ಗಕ್ಕೆ ಹೋಗಿರುತ್ತೇನೆ. ವಾಪಸ್ಸು ಸಂಜೆ 06-00 ಗಂಟೆಗೆ ಬಂದು ನೋಡಿದಾಗ ಸ್ಥಳದಲ್ಲಿ ನನ್ನ ಬೈಕ್ ಇರಲಿಲ್ಲ. ಸ್ನೇಹಿತರನ್ನು ಈ ಬಗ್ಗೆ ವಿಚಾರಿಸಲಾಗಿ ಯಾವುದೇ ಮಾಹಿತಿ ತಿಳಿಯದ ಕಾರಣ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದೂರನ್ನು ನಿಪಿಃ1 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 1(ಎ) ಅಂತ ಗುರುತಿಸಲಾಯಿತು.

ದೂರು ದಾಖಲಿಸಿದ 2 ದಿನಗಳ ನಂತರ ಪೊಲೀಸರು ಬೈಕ್ ನಿಲ್ಲಿಸಿದ್ದ ಸ್ಥಳದಲ್ಲಿ ಮಧ್ಯಾಹ್ನ 01-00 ರಿಂದ 01-30 ರವರೆಗೆ ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ. ಮಹಜರ್ ಸಮಯದಲ್ಲಿ ಭಾವಚಿತ್ರವನ್ನು ತೆಗೆಯಲಾಗಿರುತ್ತದೆ.

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮಹಜರನ್ನು ನಿಪಿಃ2 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 2(ಎ) ಅಂತ ಗುರುತಿಸಲಾಯಿತು.

ಸಾಕ್ಷಿಗೆ ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ ಮೇರೆಗೆ, ಸದರಿ ಭಾವಚಿತ್ರವನ್ನು ನಿಪಿ.3 ಅಂತ ಗುರುತಿಸಲಾಯಿತು.

3-4 ತಿಂಗಳುಗಳ ನಂತರ ಕಳ್ಳತನವಾಗಿದ್ದ ನನ್ನ ಬೈಕ್ ಆರೋಪಿಯ ಬಳಿಯಿಂದ ಸಿಕ್ಕಿರುತ್ತದೆ ಪೊಲೀಸರು ತಿಳಿಸಿರುತ್ತಾರೆ. ನನ್ನ ಬೈಕನ್ನು ಠಾಣೆಯಲ್ಲಿ ನೋಡಿರುತ್ತೇನೆ. ನನ್ನ ಬೈಕನ್ನು ಪೊಲೀಸರ ವಶದಿಂದ ಬಿಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಬೈಕನ್ನು ನೋಡಿ ಗುರುತಿಸಿದ ಮೇರೆಗೆ , ಸದರಿ ಭಾವಚಿತ್ರವನ್ನು ನಿಪಿ.4 ಅಂತ ಗುರುತಿಸಲಾಯಿತು.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ</u>**

ದಿನಾಂಕ 07.10.2025 ರಂದು ಪೊಲೀಸರು ಕಳ್ಳ ಸಿಕ್ಕಿರುವ ಬಗ್ಗೆ ವಿಚಾರ ತಿಳಿಸಿದಾಗ ನಾನು ಠಾಣೆಗೆ ಹೋಗಿರುತ್ತೇನೆ ಎಂದರೆ ಸರಿ. ಆಗ ಆರೋಪಿ ಮತ್ತು ಬೈಕನ್ನು ಪೊಲೀಸರು ತೋರಿಸಿರುತ್ತಾರೆ ಎಂದರೆ ಸರಿ. ಆರೋಪಿಯು ನನ್ನ ಬೈಕನ್ನು ಕಳ್ಳತನ ಮಾಡಿರುತ್ತಾನೆ ಎಂದು ಪೊಲೀಸರು ತಿಳಿಸಿರುತ್ತಾರೆ ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀಮತಿ ಬಿ.ಜಿ.. ಆರೋಪಿ ಪರ ವಕೀಲರಿಂದಃ</u>**

ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಡಿ ಎಲ್ ಇರುತ್ತದೆ. ನನ್ನ ಬಾಬ್ತು ವಾಹನವು ಹಿರೋ ಸ್ಪೆಂಡರ್ ಪ್ಲಸ್ ಹೈ ಸ್ಮಾರ್ಟ್ ಕಂಪನಿಗೆ ಸೇರಿದ್ದು ಹಸಿರು ಬಣ್ಣದಿಂದ ಕೂಡಿರುತ್ತದೆ. ನಾನು 75 ದಿನಗಳ ತಡವಾಗಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಬೈಕ್ ಕಳ್ಳತನವಾದ 2-3 ದಿನದಲ್ಲಿ ನಾನು ದೂರು ದಾಖಲಿಸಿರುತ್ತೇನೆ. ಘಟನೆ ನಡೆದ ದಿನದಂದು ದೂರು ದಾಖಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ತಡವಾಗಿ ದೂರು ದಾಖಲಿಸಲು ಕಾರಣವನ್ನು ನಿಪಿ.1 ರಲ್ಲಿ ತಿಳಿಸಿಲ್ಲ ಎಂದರೆ ಸರಿ. ಬೈಕ್ ಯಾವ ಸಮಯದಲ್ಲಿ ಕಳ್ಳತನವಾಗಿತ್ತು ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಬೈಕನ್ನು ಯಾರು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಲ್ಲಿ ವಾಹನಗಳ ಪಾರ್ಕಿಂಗ್ ಗೆ ವ್ಯವಸ್ಥೆ ಮಾಡಲಾಗಿದ್ದು, ಟೋಕನ್ ನೀಡುತ್ತಾರೆ ಎಂದರೆ ಸರಿ .

ಸದರಿ ಸ್ಥಳದಲ್ಲಿ ವಾಹನವನ್ನು ಪಾರ್ಕ್ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ದೂರು ದಾಖಲಿಸುವಾಗ ನನ್ನ ವಾಹನಗಳಿಗೆ ಸಂಬಂಧಿದ ದಾಖಲೆಗಳನ್ನು ಲಗತ್ತಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಚಾಲ್ತಿಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಕರೆ ಮಾಡಿದ ದಿನಾಂಕ , ತಿಂಗಳು ಹಾಗೂ ವರ್ಷವನ್ನು ಹೇಳಲು ಆಗುವುದಿಲ್ಲ.

ಠಾಣೆಯಲ್ಲಿ ಯಾರು ವಾಹನವನ್ನು ತಂದು ನಿಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಪೊಲೀಸರೊಂದಿಗೆ ಷರೀಕಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪಧಾನ ಸಿವಿಲ್ ಮತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ